**ಕರ್ನಾಟಕ ವಿಧಾನ ಪರಿಷತ್ತು**

ಚುಕ್ಕೆ ಗುರುತಿಲ್ಲದ ಪ್ರಶ್ನೆ : 10 (100)

ಸದಸ್ಯರ ಹೆಸರು : ಶ್ರೀ ಗೋವಿಂದರಾಜು (ವಿಧಾನಸಭೆಯಿಂದ ಚುನಾಯಿತರಾದವರು),

ಉತ್ತರಿಸುವ ದಿನಾಂಕ : 04.12.2023.

ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ ಐದು ವರ್ಷದಲ್ಲಿ ರಾಜ್ಯದಲ್ಲಿ ಶಾಲೆ ತೊರೆದ ವಿದ್ಯಾರ್ಥಿಗಳ ಪ್ರಮಾಣ ಎಷ್ಟು;</td><td>ಕಳೆದ ಐದು ವರ್ಷದಲ್ಲಿ ರಾಜ್ಯದಲ್ಲಿ ಶಾಲೆ ತೊರೆದಿರುವ ವಿದ್ಯಾರ್ಥಿಗಳ ಪ್ರಮಾಣ ಈ ಕೆಳಕಂಡಂತಿದೆ:-<br><table><tr><th>ವರ್ಷ</th><th>ಪ್ರಮಾಣ</th></tr><tr><td>2017-2018</td><td>9362</td></tr><tr><td>2018-2019</td><td>6806</td></tr><tr><td>2019-2020</td><td>17052</td></tr><tr><td>2020-2021</td><td>7002</td></tr><tr><td>2021-2022</td><td>13262</td></tr></table></td></tr>
<tr><td>ಆ)</td><td>ಇಡೀ ದೇಶದಲ್ಲೇ ಶಾಲೆ ತೊರೆದಿರುವ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ರಾಜ್ಯ 7ನೇ ಸ್ಥಾನ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ;</td><td>ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಕರ್ನಾಟಕ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಕಾಯ್ದೆಯ ಸೆಕ್ಷನ್ 4ರ ರೀತ್ಯ 6 ರಿಂದ 14 ವರ್ಷದ ಯಾವ ಮಗುವೂ ಶಾಲೆಯಿಂದ ಹೊರಗುಳಿಯದಂತೆ ನೋಡಿಕೊಳ್ಳಲು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಾಜ್ಯಮಟ್ಟದ ಉನ್ನತಾಧಿಕಾರಿಗಳ ಸಮಿತಿಯನ್ನು ರಚಿಸಲಾಗಿದೆ. ಕಾಲಕಾಲಕ್ಕೆ ಅಂತರ್ ಇಲಾಖಾ ಸಮನ್ವಯ ಸಮಿತಿ ಸಭೆಗಳನ್ನು ನಡೆಸಲಾಗುತ್ತಿದ್ದು, ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಮೇಲ್ವಿಚಾರಣೆ ಮಾಡಲಾಗುತ್ತಿದೆ.<br><br>ಅಲ್ಲದೆ, ಆರ್.ಟಿ.ಇ ನಿಯಮ '6ಡಿ' ರಂತೆ ಹಾಜರಾತಿ ಅಧಿಕಾರಿಗಳು ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಿ ಪೋಷಕರಿಗೆ ನೋಟೀಸ್ ನೀಡಿ, ಶಾಲೆಗೆ ಕರೆತರಲು ಒಂದು ತಿಂಗಳ ಅವಧಿ ಹಾಗೂ ಶಾಲೆಗೆ ಹಾಜರಾಗದಿದ್ದಲ್ಲಿ ನಿಯಮ 6(ಡಿ)(2) ರಡಿಯಲ್ಲಿ ಪೋಷಕರಿಗೆ ಮಗುವಿನೊಂದಿಗೆ ಸಂಬಂಧಿಸಿದ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರಾಗುವಂತೆ ಆದೇಶ ಹೊರಡಿಸುತ್ತಾರೆ.</td></tr>
<tr><td>ಇ)</td><td>ಮಕ್ಕಳು ಶಾಲೆ ತೊರೆಯದಂತೆ ನೋಡಿಕೊಳ್ಳುವ ಜವಬ್ದಾರಿ ಯಾವ ಅಧಿಕಾರಿಗಳಿಗಿದೆ; ಸಮಗ್ರ ಶಿಕ್ಷಣ ಯೋಜನೆಯಡಿಯಲ್ಲಿ ಇದನ್ನು</td><td>ಮುಖ್ಯವಾಹಿನಿಯ ಮಕ್ಕಳ ಟ್ರ್ಯಾಕಿಂಗ್ ಅನ್ನು ಕ್ಲಸ್ಟರ್ ಮಟ್ಟದಿಂದ ಜಿಲ್ಲಾಮಟ್ಟದ ತಂಡಗಳವರೆಗೆ ಮೇಲ್ವಿಚಾರಣೆ ಮಾಡಲಾಗುತ್ತದೆ. ಆದ್ದರಿಂದ ಮುಖ್ಯವಾಹಿನಿಯ ಮಕ್ಕಳು ಯಾವುದೇ ಹಂತದಲ್ಲೂ ಮತ್ತೆ ಡ್ರಾಪ್ ಔಟ್ ಆಗುವುದಿಲ್ಲ. ಈ ವಿದ್ಯಾರ್ಥಿಗಳು RTE ಕಾಯಿದೆ 2009 ರ</td></tr>
</table>

| | | |
|---|---|---|
| | ತಡೆಗಟ್ಟಲು ಕಳೆದ ಐದು ವರ್ಷದಲ್ಲಿ ಎಷ್ಟು ಅನುದಾನವನ್ನು ಸರ್ಕಾರ ಬಿಡುಗಡೆ ಮಾಡಿದೇ; | ಪ್ರಕಾರ 8 ವರ್ಷಗಳ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸುವವರೆಗೆ ಟ್ರ್ಯಾಕ್ ಮಾಡಲಾಗುತ್ತಿದೆ.<br><br>ಮಕ್ಕಳು ಶಾಲೆ ತೊರೆಯದಂತೆ ನೋಡಿಕೊಳ್ಳುವ ಜವಾಬ್ದಾರಿ ಬ್ಲಾಕ್ ಹಂತದಲ್ಲಿ ಶಿಕ್ಷಣ ಸಂಯೋಜಕರಿಗೆ (ECO), ಜಿಲ್ಲಾ ಹಂತದಲ್ಲಿ ಜಿಲ್ಲಾಮಟ್ಟದ ಅಧಿಕಾರಿಗಳಿಗಿದೆ. ಹಾಜರಾತಿ ಪ್ರಾಧಿಕಾರವಾಗಿರುವ ಶಿಕ್ಷಣ ಸಂಯೋಜಕರು ತಮ್ಮ ವ್ಯಾಪ್ತಿಯ ವಾಸಸ್ಥಳ ಅಥವಾ ಹಳ್ಳಿಯೊಳಗಿನ ಪ್ರತಿ ಮಗು ಶಾಲೆಯಿಂದ ಹೊರಗುಳಿಯದಂತೆ ತಡೆಗಟ್ಟುವ ಕ್ರಮಗಳನ್ನು ತೆಗೆದುಕೊಳ್ಳಬೇಕು. ಇದರ ಜೊತೆಗೆ ಪ್ರತಿ ತಿಂಗಳ 1 ಮತ್ತು 15ನೇ ತಾರೀಖಿನಂದು ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಕೈಗೊಂಡ ಕ್ರಮಗಳ ಬಗ್ಗೆ ಬ್ಲಾಕ್ ಶಿಕ್ಷಣಾಧಿಕಾರಿಗಳಿಗೆ ಮಾಹಿತಿಯನ್ನು ಸಲ್ಲಿಸಬೇಕಾಗುತ್ತದೆ.<br><br>ಬಿಇಒ ಪ್ರತಿ ತಿಂಗಳ 2ನೇ ತಾರೀಖಿನೊಳಗೆ ಡಿಡಿಪಿಐ (ಆಡಳಿತ) ಅವರಿಗೆ ಕ್ರೋಢೀಕರಿಸಿದ ಮಾಹಿತಿಯನ್ನು ಸಲ್ಲಿಸಬೇಕು.<br><br>ಡಿಡಿಪಿಐ(ಆಡಳಿತ) ಅವರು ಹಾಜರಾತಿ ಅಧಿಕಾರಿಗಳ ಕಾರ್ಯಕ್ಷಮತೆಯನ್ನು ಮೇಲ್ವಿಚಾರಣೆ ಮಾಡಬೇಕು ಮತ್ತು ಪ್ರಗತಿಯನ್ನು ಪರಿಶೀಲಿಸಿ ಸೂಕ್ತ ಮಾರ್ಗದರ್ಶನ ನೀಡಬೇಕು. ಇದಕ್ಕೆ ಹೆಚ್ಚುವರಿಯಾಗಿ ಎಲ್ಲಾ ಬಿಇಒಗಳ ಕ್ರೋಢೀಕೃತ ಮಾಹಿತಿಯನ್ನು ಪ್ರತಿ ತಿಂಗಳು 5ನೇ ತಾರೀಖಿನೊಳಗೆ ಶಾಲಾ ಶಿಕ್ಷಣ ಆಯುಕ್ತರಿಗೆ ಸಲ್ಲಿಸಬೇಕು. ಅಲ್ಲದೇ, ತ್ರೈಮಾಸಿಕ ಪೂರ್ಣಗೊಂಡ ನಂತರ ಮುಂದಿನ ತಿಂಗಳ 10 ರೊಳಗೆ ಪ್ರತಿ ಹಾಜರಾತಿ ಪ್ರಾಧಿಕಾರದ ಕಾರ್ಯನಿರ್ವಹಣೆಯ ಮೇಲ್ವಿಚಾರಣೆ ವರದಿಯನ್ನು ನಿರ್ದೇಶಕರಿಗೆ (ಪ್ರಾಥಮಿಕ ಶಿಕ್ಷಣ) ಸಲ್ಲಿಸಲು ಡಿಡಿಪಿಐ ರವರಿಗೆ ಸೂಚಿಸಲಾಗಿದೆ.<br><br>ಕಳೆದ 5 ವರ್ಷಗಳಲ್ಲಿ ಬಿಡುಗಡೆಯಾದ ಅನುದಾನದ ಮೊತ್ತ ಈ ಕೆಳಕಂಡಂತಿದೆ:-<br><br>**ವರ್ಷ** — **ಬಿಡುಗಡೆಯಾದ ಅನುದಾನದ ಮೊತ್ತ (ಲಕ್ಷಗಳಲ್ಲಿ)**<br>**2017-2018** — 550.45<br>**2018-2019** — 688.99<br>**2019-2020** — 149.29<br>**2020-2021** — 42.33<br>**2021-2022** — 208.08 |
| ಈ) | ಅನುದಾನ ಬಿಡುಗಡೆಗೊಂಡಿದ್ದಲ್ಲಿ ಇಷ್ಟು ಪ್ರಮಾಣದಲ್ಲಿ ಮಕ್ಕಳು ಡ್ರಾಪ್ ಔಟ್ ಆಗುತ್ತಿರುವುದನ್ನು ಸರ್ಕಾರ ತಡೆಯಲು ಕೈಗೊಂಡ ಕ್ರಮಗಳೇನು; | ಶಾಲೆಯಿಂದ ಹೊರ ಉಳಿದಿರುವ ಮಕ್ಕಳನ್ನು ಮರಳಿ ಶಾಲೆಗೆ ತರಲು ಸರ್ಕಾರವು ಈ ಕೆಳಕಂಡ ಕಾರ್ಯತಂತ್ರಗಳನ್ನು ರೂಪಿಸಿದೆ.<br>❖ 12 ತಿಂಗಳ ವಸತಿಯುತ ವಿಶೇಷ ತರಬೇತಿ (12 Month RST, ಅನುದಾನ ಸಹಿತ ತರಬೇತಿ). |

| | | |
|---|---|---|
| | ಇದರ ಜವಬ್ದಾರಿ ಯಾವ ಅಧಿಕಾರಿಗಳದ್ದಾಗಿದೆ; ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು; | ❖ 6 ತಿಂಗಳ ವಸತಿ ರಹಿತ ವಿಶೇಷ ತರಬೇತಿ (6 Month NRST, ಅನುದಾನ ಸಹಿತ ತರಬೇತಿ).<br>❖ ವಲಸಿತ ಕುಟುಂಬಗಳ ಮಕ್ಕಳಿಗಾಗಿ ವಿಶೇಷ ತರಬೇತಿ (ಟೆಂಟ್ ಶಾಲೆ) (6 Month RST, ಅನುದಾನ ಸಹಿತ ತರಬೇತಿ).<br>❖ ಶಾಲಾ ಆಧಾರಿತ ವಿಶೇಷ ತರಬೇತಿ (ಸ್ವಯಂ ಸೇವಕ ಸಹಿತ) (6 Month ತಿಂಗಳ ಅವಧಿಗೆ ಅನುದಾನ ರಹಿತ ತರಬೇತಿ).<br>❖ 6 ತಿಂಗಳ ಋತುಮಾನ ವಸತಿಯುತ ಕೇಂದ್ರ (SRST, ಅನುದಾನ ಸಹಿತ ತರಬೇತಿ).<br>❖ 3 ತಿಂಗಳ ವಸತಿ ಸಹಿತ ವಿಶೇಷ ತರಬೇತಿ (3 Month RST, ಅನುದಾನ ಸಹಿತ ತರಬೇತಿ).<br>❖ 3 ತಿಂಗಳ ವಸತಿ ರಹಿತ ವಿಶೇಷ ತರಬೇತಿ (3 Month RST, ಅನುದಾನ ಸಹಿತ ತರಬೇತಿ). |
| ಉ) | ಕೋವಿಡ್ ನಂತರ ಪೂರ್ಣ ಪ್ರಮಾಣದಲ್ಲಿ ಶಾಲೆಗಳು ಪ್ರಾರಂಭವಾದಾಗ ಈ ಮಕ್ಕಳನ್ನು ಶಾಲೆಗೆ ಕರೆತರಲು ನಿರ್ಧಿಷ್ಟವಾದ ಯೋಜನೆಯನ್ನು ರೂಪಿಸಬೇಕಾಗಿದ್ದು, ಈ ಕುರಿತು ಸರ್ಕಾರದ ಯೋಜನಗಳೇನು? | ಶಾಲಾ ಅವಧಿಯಲ್ಲಿ ಮಕ್ಕಳಿಗೆ ಶಾಲಾ ಆವರಣದಲ್ಲಿ ವಿಶೇಷ ತರಬೇತಿ ನೀಡಲಾಗುತ್ತದೆ. ಹೆಚ್ಚಿನ ವಿಶೇಷ ತರಬೇತಿ ಕೇಂದ್ರಗಳು ಸಾಮಾನ್ಯ ಶಾಲೆಯ ಶಾಲಾ ಆವರಣದಲ್ಲಿವೆ. ಇದು ಮುಖ್ಯವಾಹಿನಿಯ ಉದ್ದೇಶಕ್ಕಾಗಿ ಮತ್ತು ಶೈಕ್ಷಣಿಕ ಬೆಂಬಲವನ್ನು ಒದಗಿಸುತ್ತದೆ. ಸಾಮಾನ್ಯ ಶಾಲೆಯು ಪ್ರಮುಖ ಶಾಲೆಯಾಗಿ ಕಾರ್ಯನಿರ್ವಹಿಸುತ್ತದೆ. ವಿಶೇಷ ತರಬೇತಿ ಶಿಬಿರಗಳಲ್ಲಿ ಮಕ್ಕಳಲ್ಲಿ ಓದುವ ಸಾಮರ್ಥ್ಯವನ್ನು ಸಾಧಿಸಲು ನಲಿ-ಕಲಿ ವಾಚಕಗಳನ್ನು ಬಳಸಲಾಗುತ್ತದೆ. ಆಸಕ್ತಿಯನ್ನು ಹೆಚ್ಚಿಸಲು ಮತ್ತು ನಿರೀಕ್ಷಿತ ಸಾಮರ್ಥ್ಯಗಳನ್ನು ಸಾಧಿಸಲು ಓದುವ ಕಾರ್ಡ್‌ಗಳನ್ನು ಬಳಸಲಾಗುತ್ತದೆ. ತರಗತಿಯ ಕಲಿಕೆಯ ಪ್ರಕ್ರಿಯೆಯ ಅಗತ್ಯಗಳಿಗೆ ಅನುಗುಣವಾಗಿ ಫ್ಲಾಶ್ ಕಾರ್ಡ್‌ಗಳನ್ನು ತಯಾರಿಸಲು ಶಿಕ್ಷಕರಿಗೆ ತರಬೇತಿ ನೀಡಲಾಗುತ್ತದೆ ಮತ್ತು ಅವರು ವಸ್ತುಗಳನ್ನು ತಯಾರಿಸುತ್ತಾರೆ ಮತ್ತು ಅದಕ್ಕೆ ಅನುಗುಣವಾಗಿ ಬಳಸುತ್ತಾರೆ. ಕೋವಿಡ್-19 ಅವಧಿಯಲ್ಲಿ 2019-20 ಮತ್ತು 2020-21 ಪಠ್ಯಕ್ರಮ ಕುರಿತಂತೆ ವಿದ್ಯಾಗಮ, ರೇಡಿಯೋ ಪಾಠಗಳು ಮತ್ತು ದೂರದರ್ಶನ (ಚಂದನ ವಾಹಿನಿ) ಕಾರ್ಯಕ್ರಮಗಳನ್ನು ಲಭ್ಯಗೊಳಿಸಲಾಗಿದೆ.<br><br>ಈ ಹಿಂದೆ "ಚಿಣ್ಣರ ಅಂಗಳ" ಕಾರ್ಯಕ್ರಮವನ್ನು ಜಾರಿಗೊಳಿಸಲಾಯಿತು ಮತ್ತು ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಚಿಣ್ಣರ ಅಂಗಳ ಮಾಡ್ಯೂಲ್ ಅನ್ನು ಸಿದ್ಧಪಡಿಸಲಾಯಿತು. 2017-18 ರಿಂದ 3 ತಿಂಗಳು, 6 ತಿಂಗಳು ಮತ್ತು 12 ತಿಂಗಳ ವಸತಿ ವಿಶೇಷ ತರಬೇತಿ (ಆರ್‌ಎಸ್‌ಟಿ) ಕೇಂದ್ರಗಳು ಮತ್ತು ವಸತಿ ರಹಿತ ವಿಶೇಷ ತರಬೇತಿ (ಎನ್‌ಆರ್‌ಎಸ್‌ಟಿ) ಕೇಂದ್ರಗಳನ್ನು ಪ್ರಾರಂಭಿಸಲಾಯಿತು ಮತ್ತು ಅವರ ಓದುವ ಕಾರ್ಡ್‌ಗಳು, ನಲಿ-ಕಲಿ ಜೊತೆಗೆ ವಿಶೇಷ ತರಬೇತಿ ನೀಡಲು ವಿಶೇಷವಾಗಿ ವಿನ್ಯಾಸಗೊಳಿಸಲಾದ ಪ್ರೈಮರ್‌ಗಳನ್ನು ಬಳಸಲಾಯಿತು. ಕಾರ್ಡ್‌ಗಳು ಮತ್ತು ಬೋಧನಾ |

| | | |
|---|---|---|
| | | ಕಲಿಕಾ ಸಾಮಗ್ರಿ (TLM) ಶಾಲೆಗಳಲ್ಲಿ ಲಭ್ಯವಿದೆ. ಈ ನಿಟ್ಟಿನಲ್ಲಿ ತರಬೇತಿ ಪಡೆದ ಶಿಕ್ಷಕರಿಂದ ನಲಿ-ಕಲಿ ಪುಸ್ತಕಗಳನ್ನು ಬಳಸಿ ವಿಶೇಷ ತರಬೇತಿ ನೀಡಲಾಗುತ್ತದೆ.<br>ಅವರ ವಯಸ್ಸು ಮತ್ತು ಕಲಿಕೆಯ ಮಟ್ಟಕ್ಕೆ ಅನುಗುಣವಾಗಿ ವಿಶೇಷ ತರಬೇತಿಯನ್ನು ಪಡೆದ ನಂತರ ಈ ಮಕ್ಕಳನ್ನು ಸಮೀಪದ ಶಾಲೆಗಳಿಗೆ ದಾಖಲಿಸಲಾಗಿದೆ. ಶಾಲೆಗಳಲ್ಲಿ ಈ ಮಕ್ಕಳಿಗೆ ತರಗತಿಯಲ್ಲಿ ಪಾಠ ಮಾಡುವಾಗ ಶಿಕ್ಷಕರು ಹೆಚ್ಚಿನ ಗಮನವನ್ನು ನೀಡುತ್ತಾರೆ ಮತ್ತು ಎಲ್ಲಾ ಸಾಮರ್ಥ್ಯಗಳನ್ನು ಕಲಿಯಲು ಮತ್ತು ಶೈಕ್ಷಣಿಕವಾಗಿ ಮತ್ತು ಭಾವನಾತ್ಮಕವಾಗಿ ಉಳಿದ ವರ್ಗದೊಂದಿಗೆ ತಮ್ಮನ್ನು ತಾವು ಸಂಯೋಜಿಸಿಕೊಳ್ಳಲು ಸಹಾಯ ಮಾಡುತ್ತಾರೆ. |

ಸಂಖ್ಯೆ: ಇಪಿ 40 ಪಿಎಂಎ 2023

(ಎಸ್. ಮಧು ಬಂಗಾರಪ್ಪ)

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು